# ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಪಾಂಡವಪುರ

## ಸಿ ಸಿ. 176/2020

ಸಿಡಬ್ಲೂ. 12 ಪಿಡಬ್ಲೂಃ 7

| | |
|---|---|
| ಸಾಕ್ಷಿಯ ಹೆಸರು | ಎಂ ಡಿ ಶಿವರಾಜ |
| ತಂದೆ ಹೆಸರು | ಲೇಟ್ ಪಟೇಲ್ ದೇವಣ್ಣ |
| ವಯಸ್ಸು | 68 ವರ್ಷ |
| ಉದ್ಯೋಗ | ನಿವೃತ್ತ ಎ ಎಸ್ ಐ |
| ವಾಸ | ಮೈಸೂರು |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 16.06.2025

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1. ನಾನು 2000 ರಿಂದ 2012 ರವರೆಗೆ ಸಿ ಸಿ ಬಿಯಲ್ಲಿ ಹೆಚ್ ಸಿ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 12.09.2011 ರಂದು ನನಗೆ, ಚಾಸಾ.19 ರವರಿಗೆ, ಚಾಸಾ.11, 13 ರಿಂದ 17 ರವರಿಗೆ ಮೇಟಗಳ್ಳಿ ಪೊಲೀಸ್ ಠಾಣೆ ಗುನ್ನೆ ಸಂಃ 122/2011 ರಲ್ಲಿ ಆರೋಪಿ ಮತ್ತು ಮಾಲುಪತ್ತೆಗಾಗಿ ನೇಮಕ ಮಾಡಿದ್ದು, ಅದರಂತೆ ನಾವು ಬೆಳಿಗ್ಗೆ 9 ಗಂಟೆಗೆ ಸಿಸಿ ಬಿ ಕಚೇರಿಯಿಂದ ಹೊಟರು ಲಷ್ಕರ್ ಮೊಹಲ್ಲಾ, ಮಂಡಿಮೊಹಲ್ಲಾ ಗಳ ಕಡೆ ಗಸ್ತು ಮಾಡಿಕೊಂಡು ನಜರ್ ಬಾದ್ ಪೊಲೀಸ್ ಠಾಣಾ ಸಹರದ್ದು ಟೇರೇಸಿಯನ್ ಕಾಲೇಜು ಬಳಿ ಸಂಜೆ 4.30 ಗಂಟೆಗೆ ಗಸ್ತು ಮಾಡುತ್ತಿದ್ದಾಗ, ಬಾತ್ಮೀದಾರರಿಂದ ಉದಯಗಿರಿ ಠಾಣೆಯ ಸರಹದ್ದು ಮಹದೇವಪುರ ರಸ್ತೆಯಲ್ಲಿರುವ

ಪಂಕಜ್ ಪಾನ್ ಬ್ರೋಕರ್ ಅಂಗಡಿ ಮುಂಭಾಗ ಒಂದು ಬಳಿ ಮಾರುತಿ ಒಮಿನಿ ಕಾರಿನಲ್ಲಿ ನಾಲ್ಕು ಜನ ಆಸಾಮಿಗಳು ಅನುಮಾನಸ್ಪದವಾಗಿ ಓಡಾಡುತ್ತಿದ್ದಾರೆಂದು ತಿಳಿಸಿದ ಮೇರೆಗೆ ತಕ್ಷಣ ನಾವೆಲ್ಲರು ಅಲ್ಲಿಂದ ಹೊರಟು ಸಂಜೆ 4.45 ಗಂಟೆಗೆ ಸದರಿ ಸ್ಥಳಕ್ಕೆ ತೆರಳಿ ಸದರ ಸ್ಥಳದಲ್ಲಿದ್ದ ಒಂದು ಬಿಳಿ ಮಾರುತಿ ಒಮಿನಿ ನೋಂದಣಿ ಸಂಃ ಕೆಎ/12/ಪಿ-1007 ರಲ್ಲಿ ನಾಲ್ಕು ಆಸಾಮಿಗಳು ಕುಳಿತ್ತಿದ್ದರು. ನಾವುಗಳು ಆ ಕಾರಿನ ಹತ್ತಿರಕ್ಕೆ ಹೋಗುತ್ತಿದಂತೆ ಮಾರುತಿ ವ್ಯಾನನ್ನು ಚಾಲು ಮಾಡಲು ಪ್ರಯತ್ನಿಸಿದರು, ತಕ್ಷಣ ನಾವುಗಳು ಸುತ್ತುವರಿದು ಸದರಿ ಆಸಾಮಿಗಳನ್ನು ವಶಕ್ಕೆ ಪಡೆದು, ವಿಚಾರಿಸಲಾಗಿ ಸೈಯದ್ ವಸೀಂ, ಸಮೀರ್ ಖಾನ್, ಸಮೀಉಲ್ಲಾ ಮತ್ತು ಮುಸ್ತಾಫ ಎಂದು ತಿಳಿಸಿದರು. ವಿಚಾರಣೆಯಿಂದ ಸದರಿ ಆಸಾಮಿಗಳು ಸದರಿ ಸ್ಥಳದಲ್ಲಿ ಇದ್ದ ಬಗ್ಗೆ ಸಮಂಜಸ ಉತ್ತರ ನೀಡದ ಕಾರಣ ಹಾಗೂ ವಿಚಾರಣೆ ಕಾಲದಲ್ಲಿ 1 ಮತುತ 2 ನೇ ಆರೋಪಿಗಳು ಠಾಣಾ ಎಂ ಓಬಿ ಆಸಾಮಿಗಳು ಎಂದು ತಿಳಿದು ಬಂದಿದ್ದರಿಂದ ಅವರುಗಳ ಮೇಲೆ ನಮಗೆ ಅನುಮಾನ ಬಂದಿದ್ದರಿಂದ ಸದರಿ ಸ್ಥಳಕ್ಕೆ ಎ ಎಸ್ ಐ ಜಯಶೀಲನ್ ರವರು ಚಾಸಾ.5 ಮತ್ತು 6 ರವರನ್ನು ಸ್ಥಳಕ್ಕೆ ಬರಮಾಡಿಕೊಂಡು ಸದರಿಯವರಿಗೆ ವಿಚಾರ ತಿಳಿಸಿ ನಂತರ ನಾವುಗಳು ನಮ್ಮ ಅಂಗ ಶೋಧನೆ ಮಾಡಿಕೊಂಡು ತಮ್ಮ ಬಳಿ ಯಾವುದೇ ವಸ್ತುಗಳು ಇಲ್ಲವೆಂದು ಖಚಿತ ಪಡಿಸಿಕೊಂಡ ನಂತರ ಚಾಸಾ.13 ರವರಿಂದ ಆಸಾಮಿಗಳ ಅಂಗ ಶೋಧನೆ ಮಾಡಿಸಿ ನೋಡಿದಾಗ 1 ನೇ ಆರೋಪಿಯ ಬಲಭಾಗದ ಪ್ಯಾಂಟಿನ ಜೇಬಿನಲ್ಲಿ

ಒಂದು ಕಾಗದದ ಪೊಟ್ಟಣ ಇದ್ದು ಪರಿಶೀಲಿಸಿದಾಗ ಒಂದು ಪ್ಯಾನ್ಸಿ ಸರ ಇದ್ದು ಅದರರ ತೂಕ 29 ಗ್ರಾಂ ಆಗಿತ್ತು. ಪ್ಯಾಂಟಿನ ಎಡಭಾಗದ ಜೇಬಿನಲ್ಲಿ 4 ಚೀಟಿಗಳು ದೊರೆತಿದ್ದು ಪರಿಶೀಲಿಸಿದಾಗ ಮೈಸೂರಿನ ಅಶೋಕ ರಸ್ತೆಯಲ್ಲಿರುವ ಮಹೇಶ್ ಪಾನ್ ಬ್ರೋಕರ್ ನ ಎರಡು ಗಿರಿವಿ ಚೀಟಿಗಳು ಮತ್ತು ಗೀಸು ಲಾಲ್ ಮತ್ತು ಸನ್ಸ್ ಅಂಗಡಿಯ ಎರಡು ಗಿರಿವಿ ಚೀಟಿಗಳು ಆಗಿದ್ದು, ಸದರಿ ಗಿರಿವಿ ಚೀಟಿಗಳಲ್ಲಿ ಚಿನ್ನದ ಪದಾರ್ಥಗಳನ್ನು ಗಿರಿವಿ ಇಟ್ಟಿರುವ ಬಗ್ಗೆ ನಮೂದಾಗಿರುವುದು ಕಂಡು ಬಂತು. 3 ನೇ ಆಸಾಮಿ ಸಮೀ ಉಲ್ಲಾ ಅವರ ಅಂಗ ಶೋಧನೆ ಮಾಡಿದಾಗ ಪ್ಯಾಂಟಿನ ಬಲಭಾಗದ ಜೇಬಿನಲ್ಲಿ ಒಂದು ಕಾಗದದ ಪೊಟ್ಟಣದ ಇದ್ದು ತೆಗೆದು ನೋಡಿದಾಗ ಒಂದು ಚಿನ್ನದ ಮುತ್ತಿನ ಓಲೆ ಅದರ ತೂಕ 3.100 ಮಿ ಲಿ ಮತ್ತು ಒಂದು ಚಿನ್ನದ ಬಿಳಿ ಹರಳಿನ ಓಲೆ ಮತ್ತು ಪ್ಲೇಟ್ಇದ್ದು ತೂಕ ಸುಮಾರು 1.800 ಗ್ರಾಂ, ಒಂದು ಚಿನ್ನದ ಮಾಟೀ ಇದ್ದು ತೂಕ ಸುಮಾರು 2.200 ಗ್ರಾಂ ಇತ್ತು. 2 ಮತ್ತು 4 ನೇ ಆಸಾಮಿಗಳ ಅಂಗ ಶೋಧನೆ ಮಾಡಿದಾಗ ಯಾವುದೇ ವಸ್ತುಗಳು ದೊರಕಿಲ್ಲ. 1 ಮತ್ತು 3 ನೇ ಆಸಾಮಿಗಳ ವಶದಲ್ಲಿದ್ದ ಚಿನ್ನದ ಒಡವೆಗಳ ಬಗ್ಗೆ ವಿಚಾರಿಸಿದಾಗ ಸದರಿ ಚಿನ್ನದ ಒಡವೆಗಳನ್ನು ಮೈಸೂರಿನ ಬೆಲವತ್ತದ ಒಂದು ಮನೆಯಲ್ಲಿ ಕಳ್ಳತನ ಮಾಡಿರುವುದಾಗಿ ತಿಳಿಸಿರುತ್ತಾರೆ. ಗಿರಿವಿ ಚೀಟಿಗಳ ಬಗ್ಗೆ ವಿಚಾರಿಸಿದಾಗ, ಬೆಲವತ್ತದ ಮನೆಗಳಲ್ಲಿ ಕಳ್ಳತನ ಮಾಡಿದ್ದ ಚಿನ್ನದ ಒಡವೆಗಳನ್ನು ಗಿರಿವಿ ಇಟ್ಟಿರುವುದಾಗಿ ತಿಳಿಸಿದರು. ಸದರಿ ಆಸಾಮಿಗಳ ವಶದದಲ್ಲಿದ್ದ ಮಾರುತಿ ಕಾರನ್ನು ಪರಿಶೀಲಿಸಿದಾಗ ಸದರಿ

*ಕಾರಿನ ಹಿಂಭಾಗದ ಶೀಟಿನ ಕೆಳಭಾಗ ಒಂದು ಪ್ಲಾಸ್ಟಿಕ್ ಕವರು ಇದ್ದು ಅದನ್ನು ತೆಗೆದು ನೋಡಿದಾಗ ಒಂದೂವರೆ ಅಡಿ ಅಳತೆಯ ಉದ್ದದ ಹೆಬ್ಬೆರಳು ಗಾತ್ರದ ಒಂದು ಕಬ್ಬಿಣದ ರಾಡು ಇತ್ತು. ಒಂದು ಕಡೆ ಚೂಪಾಗಿದ್ದು ಇನ್ನು ಒಂದು ಕಡೆ ನಟ್ ಮಾದರಿ ಇತ್ತು. ಒಂದು ಕಬ್ಬಿಣ 10 ಇಂಚು ಉದ್ದದ ಚಾಣ ಇತ್ತು. 10 ಇಂಚು ಉದ್ದದ ಸ್ಕ್ರೂ ಡ್ರೈವರ್ ಇದ್ದು ಅದರಲ್ಲಿ ಕೆಂಪು ಹಿಡಿಕೆ ಇದ್ದು ಹಿಡಿಕೆ ಅರ್ದ ಮುರಿದಿತ್ತು. ಒಂದು ಜೊತೆ ರಬ್ಬರ್ ಹ್ಯಾಂಡ್ ಗ್ಲೌಸ್ ಇತ್ತು. ಸದರಿ ವಸ್ತುಗಳ ಬಗ್ಗೆ ವಿಚಾರಿಸಿದಾಗ ಸಮಂಜಸ ಉತ್ತರ ನೀಡಿಲಿಲ್ಲ. ಸದರಿ ವಸ್ತುಗಾಳನ್ನು ಕಳ್ಳತನ ಮಾಡಲು ಉಪಯೋಗಿಸುತ್ತಿದುದ್ದಾಗಿ ಹಾಗೂ ಮಾರುತಿ ಕಾರನ್ನು ಕಳ್ಳತನ ಮಾಡಿದ್ದ ವಸ್ತುಗಳನ್ನು ಸಾಗಾಣಿಕೆ ಮಾಡುವುದಾಗಿ ತಿಳಿಸಿದರು. ಆದ್ದರಿಂದ ಆರೋಪಿ ಮತ್ತು ಮಾಲುಗಳನ್ನು ವಶ ಪಡಿಸಿಕೊಂಡು ಮುಂದಿನ ಕ್ರಮಕ್ಕಾಗಿ ಸ್ಥಳದಲ್ಲೆ ಮಹಜರು ಬರೆದು ಸಿ ಸಿ ಬಿ ಕಚೇರಿಯ ಪಿ ಐ ರವರು ಮುಂದೆ ಹಾಜರು ಪಡಿಸಿದೇನು. ಚಾಸಾ.19 ರವರು ವರದಿ ನೀಡಿರುತ್ತಾರೆ. ಸದರಿ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.7 ಎಂದು ಈಗಾಗಲೇ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.7 ಸಿ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. 1 ಮತ್ತು 3 ನೇ ಆರೋಪಿಗಳನ್ನು ಮುಂದೆ ನೋಡಿದರೆ ಗುರುತಿಸುತ್ತೇನೆ. ಈ ಸಂಬಂಧ ಹೇಳಿಕೆ ನೀಡಿರುತ್ತೇನೆ.*

***ಪಾಟೀ ಸವಾಲುಃ ಆರೋಪಿ ಪರ ವಕೀಲರು ಗೈರು ಹಾಜರು, ಆರೋಪಿ ಸ್ವತಃ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲು ಸಕಾರಣಗಳು***

*ಕಂಡು ಬಂದಿಲ್ಲ. ಆದ್ದರಿಂದ ಆರೋಪಿಯ ಮನವಿಯನ್ನು ತಿರಸ್ಕರಿಸಲಾಯಿತು. ಆರೋಪಿ ಈ ಸಾಕ್ಷೀದಾರರನ್ನು ಪಾಟೀ ಸವಾಲು ಮಾಡಲಿಲ್ಲ ಎಂದು ತೆಗೆದುಕೊಳ್ಳಲಾಯಿತು.*

*ಮರು ವಿಚಾರಣೆ ಇಲ್ಲ.*

*(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).*

*ಸಾ.ಓ.ಹೇ.ಕೆ.ಸ.ಇ.*

*ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು*
*ಮತ್ತು ಜೆ.ಎಂ.ಎಫ್.ಸಿ.ಪಾಂಡವಪುರ.*